# ವಿಕಲತೆಯುಳ್ಳ ಮಕ್ಕಳ ಶಿಕ್ಷಣ

## ಸೂಕ್ತ ಬೆಂಬಲದೊಂದಿಗೆ ಸಮನ್ವಯಗೊಳ್ಳುವ ಹಕ್ಕು

ಡಾ. ಸುದೇಶ್ ಮುಖೋಪಾಧ್ಯಾಯ

**ಪ್ರಸ್ತಾವನೆ**

ಉತ್ತರದಾಯಿತ್ವವೆಂಬುದು ಇಂದು ಬಹು ಪ್ರಚಲಿತದಲ್ಲಿರುವ ಪದವಾಗಿದೆ. ಇದನ್ನು ಮೇಲಿನವರ ಸಂಬಂಧದಲ್ಲೂ ಹಾಗೂ ಅಧೀನದಲ್ಲಿರುವವರ ಸಂಬಂಧದಲ್ಲೂ ಬಳಸಬಹುದು. ನಮ್ಮಲ್ಲಿ ಪ್ರತಿಯೊಬ್ಬರೂ ಈ ಘಟನೆಗಳ ಅವಿಚ್ಛಿನ್ನ ಸರಣಿಯಲ್ಲಿ ನಾವು ಯಾವುದೇ ಹುದ್ದೆ ಅಥವಾ ಸ್ಥಾನದಲಿರಲಿ, ಹಿಂದೆಂದಿಗಿಂತಲೂ ಈಗ ಈ ನಿಟ್ಟಿನಲ್ಲಿ ಆಲೋಚಿಸಬೇಕಾಗಿದೆ ಮತ್ತು ಪ್ರತಿಕ್ರಿಯಿಸಬೇಕಾಗಿದೆ. ನಾವು ಏನು ಹೇಳುತ್ತಿದ್ದೇವೋ ಅಥವಾ ವಾಗ್ದಾನ ನೀಡುತ್ತಿದ್ದೇವೋ ಅದನ್ನು ನಿಜವಾಗಿ ಹೇಳುತ್ತಿದ್ದೇವೆಯೇ ಮತ್ತು ಅದರಂತೆ ನಡೆದು ಕೊಳ್ಳುತ್ತಿದ್ದೇವೆಯೇ? ನನಗೆ ಈ ನಿಲುವನ್ನು ತಾಳಲು ಏನಾದರೂ ಕಾರಣವಿದೆಯೇ? ಎಂದು ಆಲೋಚಿಸಬೇಕಾಗಿದೆ. ಭಾರತದ ಶಿಕ್ಷಣ ವ್ಯವಸ್ಥೆಯ ಅತ್ಯಂತ ಪ್ರಬಲ ಸಂಸ್ಥೆಯಾದ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು The Central Advisory Board of Education - CABE) 2019ರ ಸೆಪ್ಟೆಂಬರ್ 21ರಂದು ನಡೆಸಿದ ಸಭೆಯಲ್ಲಿ, ಗೌರವಾನ್ವಿತ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಈ ಮಾತುಗಳನ್ನು ಹೇಳಿದರು:

"ರಾಷ್ಟ್ರೀಯಕರಡು ಶಿಕ್ಷಣ ನೀತಿ 2019 (Draft National Education Policy 2019) ಅನ್ನು ಪ್ರವೇಶಾವಕಾಶ, ನ್ಯಾಯಪರತೆ, ಉತ್ತಮ ಗುಣಮಟ್ಟ, ಉತ್ತರದಾಯಿತ್ವ ಮತ್ತು ಕೈಗೆಟುಕುವಿಕೆಯ ಸ್ತಂಭಗಳ ಆಧಾರದ ಮೇಲೆ ರೂಪಿಸಲಾಗಿದೆ. ಇದು ಇತರ ವಿಷಯಗಳ ಜೊತೆಗೆ ಗುಣಮಟ್ಟ ಮತ್ತು ನ್ಯಾಯಬದ್ಧತೆಯ ಆಧಾರದ ಮೇಲೆ ಒಂದು ನಿಷ್ಪಕ್ಷಪಾತ, ನ್ಯಾಯಯುತ ಮತ್ತು ಮಾನವೀಯತೆಯುಳ್ಳ ಸಮಾಜವನ್ನು ನಿರ್ಮಿಸಲು ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವ ಗುರಿಯನ್ನು ಹೊಂದಿದೆ. ಇಡೀ ದೇಶದಲ್ಲಿ ಎಲ್ಲಾ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣಪಡೆಯಲು ಸಮಾನ ಪ್ರವೇಶಾವಕಾಶವನ್ನು ಹೊಂದುವಂತೆ ಮಾಡುವುದಕ್ಕಾಗಿ ರಾಷ್ಟ್ರೀಯ ಕರಡು ಶಿಕ್ಷಣ ನೀತಿ 2019ರಲ್ಲಿ ಹಲವಾರು ಸುಧಾರಣಾ ಕ್ರಮಗಳನ್ನು ಪ್ರಸ್ತಾಪಿಸಲಾಗಿದೆ."[1]

ಈ ದೇಶದ ಮುಂದಿನ ಹಾಗೂ ಈಗಿರುವ ಪೀಳಿಗೆಯ ವೈಕಲ್ಯವುಳ್ಳ ಮಕ್ಕಳೂ (CwDs) ಸೇರಿದಂತೆ ಲಕ್ಷಾಂತರ ಮಕ್ಕಳಿಗೆ ಈ ರಾಷ್ಟ್ರೀಯ ಕರಡು ಶಿಕ್ಷಣ ನೀತಿ 2019 ಏನನ್ನು ಒದಗಿಸುತ್ತದೆಂದು ನಾವು ನೋಡೋಣ. ಈ ನೀತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಮುಂತಾದ ಅವಕಾಶ ವಂಚಿತ ಗುಂಪುಗಳನ್ನು ಕಡಿಮೆ ಪ್ರಾತಿನಿಧ್ಯ ಹೊಂದಿರುವ ಗುಂಪುಗಳು (Under-Represented Groups) ಎಂದು ಕರೆಯಲಾಗಿದೆ. ಇಲ್ಲಿನ ಗಮನಾರ್ಹ ಅಂಶವೆಂದರೆ ಎಲ್ಲಾ ಜನವರ್ಗಕ್ಕೂ ಅನ್ವಯಿಸುವಂತೆ ಲಿಂಗವನ್ನೂ ಒಂದು ವಿದ್ಯಮಾನವೆಂದು ಗುರುತಿಸಲಾಗಿದೆ. ಆದರೆ ನನ್ನ ಏಕೈಕ ಆತಂಕವೆಂದರೆ ಕಡಿಮೆ ಪ್ರಾತಿನಿಧ್ಯ / ಅನಾನುಕೂಲತೆಯನ್ನು ವ್ಯಾಖ್ಯಾನಿಸುವ ಎಲ್ಲಾ ಸಾಮಾಜಿಕ, ಆರ್ಥಿಕ, ಭೌಗೋಳಿಕ ಮತ್ತು ಇತರ ಮಾನವ ರಚಿತ ಗಣನಾಂಶಗಳಲ್ಲಿ ಕಂಡುಬರುವ ಒಂದು ಅನಾನುಕೂಲವಾದ ವಿಕಲತೆಯನ್ನೂ ಇಲ್ಲಿ ಏಕೆ ಪರಿಗಣಿಸಿಲ್ಲ? ಸರ್ಕಾರವು ಭರವಸೆ ನೀಡಿದಂತೆ ಕೊನೆಯ ಮತ್ತು ಹೆಚ್ಚು ಸಮಗ್ರವಾದ ರಾಷ್ಟ್ರೀಯ ಶಿಕ್ಷಣ ನೀತಿಯು ಈಗ ದೊರಕಿದೆ. ಇದನ್ನು ಸಂಸತ್ತು ಇನ್ನೂ ಅನುಮೋದಿಸಬೇಕಾಗಿದೆ. ಆದರೆ ಅದರ ಸೆಕ್ಷನ್ 6ರಲ್ಲಿ ಈಗಲೂ 'ವಿಕಲತೆ'ಯನ್ನು ಎಲ್ಲ ವರ್ಗಗಳಲ್ಲೂ ಕಂಡುಬರುವ ಒಂದು ಸವಾಲೆಂದು ಹೇಳಿಲ್ಲ.

ನಾವು ಮುಂಬರುವ ಪೀಳಿಗೆಗಳಿಗೆ ನಿಜಕ್ಕೂ ಉತ್ತರದಾಯಿ-ಗಳಾಗಲು ನಮ್ಮ ಮುಂದಿರುವ ಸವಾಲುಗಳನ್ನು ಎದುರಿಸಲು ಮತ್ತು ಅವಕಾಶಗಳನ್ನು ಬಳಸಿಕೊಳ್ಳಲುಸಿದ್ಧರಿದ್ದೇವೆಯೇ? ಸ್ವೀಡನ್ ದೇಶದ 16 ವರ್ಷದ ವಿದ್ಯಾರ್ಥಿನಿ ಗ್ರೆಟಾ ಥನ್‌ಬರ್ಗ್ ಹವಾಮಾನ ಬದಲಾವಣೆಯ ಬಗ್ಗೆ ಒಂದು ಚಳುವಳಿಯನ್ನು ಇತ್ತೀಚೆಗೆ ಪ್ರಾರಂಭಿಸಿದ್ದಾಳೆ ಮತ್ತು ನಮ್ಮಲ್ಲಿ ಪ್ರತಿಯೊಬ್ಬರಿಗೂ ನಾವು ಆಗಬೇಕಾಗಿರುವಷ್ಟು ಕೆಲಸ ಮಾಡುತ್ತಿದ್ದೇವೆಯೇ? ಎಂಬ ಪ್ರಶ್ನೆಯನ್ನು ಕೇಳಿದ್ದಾಳೆ. ಅವಳು ಪ್ರಪಂಚದಾದ್ಯಂತದ ಅನೇಕ ವಿದ್ಯಾರ್ಥಿಗಳು ಮತ್ತು ನಾಗರಿಕರನ್ನು ತಲುಪಿದ್ದಾಳೆ. ಕುತೂಹಲಕಾರಿ ವಿಷಯವೆಂದರೆ, ಮಾಧ್ಯಮಗಳ ಪ್ರಕಾರ ಅವಳು ಆಟಿಸಂ ವ್ಯಾಪ್ತಿಯಲ್ಲಿ ಬರುತ್ತಾಳೆ.

ಇತರರಿಗಿಂತ ಭಿನ್ನವಾಗಿರುವುದು ಒಂದು ವರದಾನವಾಗಬಹುದು

ಥನ್‌ಬರ್ಗ್‌ನ ಹೆತ್ತವರು, ತಮ್ಮ ಮಗಳು ಮೊದಲು ಮನ ನೋಯುವಷ್ಟು ಅಂತರ್ಮುಖಿಯಾಗಿದ್ದು ಯಾವಾಗಲೂ ಇತರ ಮಕ್ಕಳಿಂದ ಸ್ವಲ್ಪ ಬೇರೆಯೇ ಇರುತ್ತಿದ್ದಳು ಎಂದು ಹೇಳುತ್ತಾರೆ. ನಾಲ್ಕು ವರ್ಷಗಳ ಹಿಂದೆ, ಅವಳಿಗೆ ಆಟಿಸಂ ಗುಂಪಿನ ಆಸ್ಪರ್ಜರ್‌ನ ಆಟಿಸಂ (ಲಘು ಸ್ವರೂಪದ ಆಟಿಸಂ) ಇದೆಯೆಂದು ಗುರುತಿಸಲಾಯಿತು. ಇದು ಅವಳು ಖಿನ್ನತೆಯಿಂದ ಹೊರಬಂದ ನಂತರ ಹವಾಮಾನ ಬದಲಾವಣೆಯ ಪ್ರಮುಖ ವಿಷಯವನ್ನು ಕುರಿತು ಯಾವುದೇ ಅಳುಕಿಲ್ಲದೆ ಮಗ್ನವಾಗಿರುವುದನ್ನು ವಿವರಿಸಲು ಸಹಾಯ ಮಾಡಿತು. ರೇಡಿಯೋ 4ರ 'ಇಂದಿನ ಕಾರ್ಯಕ್ರಮ'ದಲ್ಲಿ 'ಇತರರಿಗಿಂತ ಭಿನ್ನವಾಗಿರುವುದು ಒಂದು ವರದಾನ'ಎಂಬ ವಿಷಯವನ್ನು ಕುರಿತು ಅವಳು ಸಂದರ್ಶನ ನೀಡಿದಾಗ ನಿಕ್‌ರಾಬಿನ್ಸನ್‌ಗೆ ಅವಳು ಹೀಗೆ ಹೇಳಿದಳು– 'ಇದರಿಂದಾಗಿ ನಾನು ವಿಷಯಗಳನ್ನು ಅವುಗಳ ಚೌಕಟ್ಟಿನಾಚೆ ಇರಿಸಿ ನೋಡಲು ನನಗೆ ಸಾಧ್ಯವಾಗಿದೆ. ನಾನು ಸುಲಭವಾಗಿ ಸುಳ್ಳಿಗೆ ಬಲಿಯಾಗುವುದಿಲ್ಲ. ನಾನು ವಿಷಯಗಳ ಒಳ ಆಳವನ್ನು ಅರಿಯಬಲ್ಲೆ. ನಾನು ಎಲ್ಲರಂತೆಯೇ ಇದ್ದಿದ್ದರೆ (ಉದಾಹರಣೆಗೆ) ಈ ಶಾಲಾ ಮುಷ್ಕರವನ್ನು ಪ್ರಾರಂಭಿಸುತ್ತಿರಲಿಲ್ಲ.'

ಮೂಲ: (ಬಿರೆಲ್ ಆಯ್ದ ಭಾಗ, ಇಯಾನ್, ಏಪ್ರಿಲ್ 23, 2019).-------

ಆದ್ದರಿಂದ, ವೈಕಲ್ಯವುಳ್ಳ ವ್ಯಕ್ತಿಗಳನ್ನು ಮುಖ್ಯ ವಾಹಿನಿಯಲ್ಲಿ ಸಮನ್ವಯ ಮಾಡಿಕೊಳ್ಳಬೇಕಾದ ಅಗತ್ಯವನ್ನು ಕುರಿತು ವಾದಮಾಡುವುದನ್ನೂ ಮೀರಿ ಕೆಲಸ ಮಾಡಬೇಕಾದ ಅಗತ್ಯವಿದೆ ಮತ್ತು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಅದರಲ್ಲೂ ಶಾಲಾ ಮಟ್ಟದಲ್ಲಿ ಚಿಕ್ಕ ಮಕ್ಕಳ ಶಿಕ್ಷಣದಿಂದ ಹಿಡಿದು ಪ್ರೌಢಾವಸ್ಥೆಯವರೆಗಿನ ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಸಬಲೀಕರಣದ ಪರಿಸರವುಂಟಾಗುವಂತೆ ನೋಡಿಕೊಳ್ಳಲು ನಾವು ಉತ್ತರದಾಯಿಗಳಾಗಿ ಮತ್ತು ಕ್ರಿಯಾಶೀಲರಾಗಿ ಕೆಲಸ ಮಾಡಬೇಕಾಗಿದೆ. ನಾವು ನಮ್ಮ ಸಮುದಾಯಗಳಲ್ಲಿ ಮತ್ತು ಪ್ರಪಂಚದಾದ್ಯಂತ, ಅನೇಕ ಮಕ್ಕಳ ಮತ್ತು ಚಿಕ್ಕ ವಯಸ್ಸಿನ ವೈಕಲ್ಯವುಳ್ಳ ಮಕ್ಕಳ ಅನುಭವಗಳನ್ನು ಗಮನಿಸಿದರೆ ಸಮನ್ವಯವು ಕೇವಲ ಅವರಿಗೆ ಮಾತ್ರವಲ್ಲ, ನಮ್ಮಲ್ಲಿ ಪ್ರತಿಯೊಬ್ಬರಿಗೂಬಲವರ್ಧನೆ ಮಾಡುತ್ತದೆ ಎಂಬ ಸಂದೇಶವು ಬಲವಾಗಿ ಮತ್ತು ಸ್ಪಷ್ಟವಾಗಿ ದೊರಕುತ್ತದೆ. ನಾವು ಇಲ್ಲಿ ಸಾಮರ್ಥ್ಯಗಳನ್ನು ಗುರುತಿಸಿ ಅವುಗಳ ಮೇಲೆ ನಿರ್ಮಾಣ ಮಾಡಬೇಕೇ ಹೊರತು ಸಮನ್ವಯದ ಮಾರ್ಗಕ್ಕೆಗೊಳ್ಳಲು ಸೂಕ್ತವಲ್ಲದ ದೃಷ್ಟಿಕೋನಗಳ ಬಲೆಯಲ್ಲಿ ಸಿಲುಕಬಾರದು. ಈ ಹಿನ್ನೆಲೆಯಲ್ಲಿ ನಾವು ಶಿಕ್ಷಣದ ಪರಿಕಲ್ಪನೆಯನ್ನು ಅರ್ಥ-ಮಾಡಿಕೊಳ್ಳೋಣ ಮತ್ತು ಒಟ್ಟಿಗೆ ಸಬಲೀಕರಣದ ಹಾದಿಯನ್ನು ಕಂಡುಕೊಳ್ಳೋಣ.

**ಶಿಕ್ಷಣ**

ಶಿಕ್ಷಣವನ್ನು ಗ್ರೀಕ್‌ನಲ್ಲಿ 'ಎಡುಕೇರ್' ಅಂದರೆ ಸಾಮರ್ಥ್ಯವನ್ನು ಹೊರತರುವುದು ಅಥವಾ ಸುಪ್ತ ಸಾಮರ್ಥ್ಯವನ್ನು ಬೆಳೆಸುವುದು ಎಂಬ ಪರಿಕಲ್ಪನೆ ಆಧಾರದಲ್ಲಿ ವ್ಯಾಖ್ಯಾನಿಸಲಾಗಿದೆ.

ಹೀಗಾಗಿ ಶಿಕ್ಷಣವು: ಉದ್ದೇಶ ಪೂರ್ವಕವಾದದ್ದು ಮತ್ತು ಭರವಸೆಯನ್ನುಳ್ಳದ್ದು ಜನರು ಅವರಿರುವುದಕ್ಕಿಂತ ಹೆಚ್ಚು ಆಗಬಲ್ಲರು (ಪ್ರಗತಿ ಸಾಧಿಸಬಲ್ಲರು) ಎಂಬ ನಂಬಿಕೆಯಿಂದ ಕಲಿಕೆಯು ಆಗುವಂತೆ ಮಾಡುವುದು. ಮಾಹಿತಿಯುಕ್ತ, ಗೌರವಯುತ ಮತ್ತು ವಿವೇಕಪೂರ್ಣವಾದದ್ದು ಸತ್ಯ ಮತ್ತು ಸಾಧ್ಯತೆಯನ್ನು ಆಹ್ವಾನಿಸುವ ಒಂದು ಪ್ರಕ್ರಿಯೆ.

ಜೀವನದಲ್ಲಿ ಎಲ್ಲರೂ ಮುಂದುವರೆಯಲಿ ಮತ್ತು ಹಂಚಿಕೊಳ್ಳಲಿ ಎಂಬ ಬಯಕೆಯಲ್ಲಿ ಬೇರೂರಿದ್ದು. ಇದು ತಾವೂ ಹಾಗೂ ಇತರ ಜನರು ತಮ್ಮ ಬದುಕನ್ನು ಎಷ್ಟು ಚೆನ್ನಾಗಿ ಬಾಳಲು ಸಾಧ್ಯವೋ ಅಷ್ಟು ಚೆನ್ನಾಗಿ ಬಾಳಲು ನೆರವು ನೀಡುವ ಒಂದು ಸಹಕಾರಿ ಮತ್ತು ಸಮನ್ವಯ ಚಟುವಟಿಕೆ (ಸ್ಮಿತ್, 2015)

ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣವನ್ನು ಅಲ್ಲಿಗೆ ಸೂಕ್ತವಾದ ಉಪಬಂಧಗಳು ಒಟ್ಟಾರೆ ಶಿಕ್ಷಣದ, ವಿಶೇಷವಾಗಿ ವೈಕಲ್ಯವುಳ್ಳ ಮಕ್ಕಳ ಶಿಕ್ಷಣದ ಇತಿಹಾಸದ ಬೆಳವಣಿಗೆಯೊಂದಿಗೆ ಬದಲಾಗುತ್ತಾ ಬಂದರೂ ಹಲವಾರು ಮಾರ್ಗಗಳ ಮೂಲಕ ಅದನ್ನು ಪರಿಹರಿಸಲಾಗುತ್ತಿದೆ. ಈ ವಿವಿಧ ವಿಧಾನಗಳು ಆರ್ಥಿಕ ಸ್ಥಿತಿಯಿಂದ ಮತ್ತು ಮೌಲ್ಯ ವ್ಯವಸ್ಥೆಗಳಿಂದಲೂ ಪ್ರಭಾವಿತವಾಗುತ್ತವೆ. ಕೆಲವು ದೇಶಗಳಲ್ಲಿ ಸಮನ್ವಯ ಶಿಕ್ಷಣವೇ ಹೆಚ್ಚು ಪ್ರಚಲಿತ ವಿಧಾನವಾಗಿದೆ ಮತ್ತು ಬೇರೆಡೆ ವಿಶೇಷ ಶಾಲಾ ಶಿಕ್ಷಣವೇ ಪ್ರಾಶಸ್ತ್ಯ ಪಡೆದ ವಿಧಾನವಾಗಿದೆ. ಇನ್ನೂ ಅನೇಕ ದೇಶಗಳಲ್ಲಿ ತೀವ್ರ ಹಾಗೂ ಹಲವಾರು ವಿಕಲತೆಗಳುಳ್ಳ ಮಕ್ಕಳಿಗೆ ಮನೆ ಸೇವೆ ವಿಧಾನ ಹಾಗೂ ಔಪಚಾರಿಕ ಸಂಸ್ಥೆಗಳಲ್ಲದ ಕಡೆಗಳಲ್ಲಿ ಸೇವೆಗಳನ್ನು ನೀಡುವ ವ್ಯವಸ್ಥೆಗಳೂ ಒಳಗೊಂಡಂತೆ ಮಿಶ್ರ ವಿಧಾನಗಳಿಗೆ ಪ್ರಾಧಾನ್ಯತೆ ನೀಡಲಾಗಿದೆ.ಇಂದು, ಸಮನ್ವಯ ಶಿಕ್ಷಣವು ಎಲ್ಲ ಮಕ್ಕಳು ತಮ್ಮ ಮನೆ ಹತ್ತಿರವಿರುವ ಸಾಮಾನ್ಯ ಶಾಲೆಯಲ್ಲಿ ಕಲಿಯಬಲ್ಲರು ಎಂಬ ತತ್ವದ ಆಧಾರದ ಮೇಲೆ ನಿಂತಿದೆ. ಕಲಿಯುವವರ ವೈವಿಧ್ಯತೆಗೆ ಅನುಗುಣವಾಗಿ ವ್ಯವಸ್ಥೆ ಬದಲಾಗಬೇಕೇ ಹೊರತು ವ್ಯವಸ್ಥೆಗೆ ತಕ್ಕಂತೆ ಕಲಿಯುವವರು ಬದಲಾಗತಕ್ಕದ್ದಲ್ಲ ಎಂಬುದನ್ನು ವಿಶ್ವಸಂಸ್ಥೆಯ ವೈಕಲ್ಯವುಳ್ಳ ವ್ಯಕ್ತಿಗಳ ಹಕ್ಕುಗಳನ್ನು ಕುರಿತ

**ಪಂಚವಾರ್ಷಿಕ ಯೋಜನೆಗಳ ಅಡಿಯಲ್ಲಿ ಸಮನ್ವಯ ಶಿಕ್ಷಣದ ಏರ್ಪಾಟುಗಳು**

| ಪಂಚವಾರ್ಷಿಕ ಯೋಜನೆಗಳು | ಪ್ರಮುಖ ಬೆಳವಣಿಗೆಗಳು |
|---|---|
| ಮೊದಲ ಯೋಜನೆ 1951-56 | ಸಮಾಜ ಕಲ್ಯಾಣದಡಿಯಲ್ಲಿ |
| ಮೂರನೇ ಯೋಜನೆ 1961-66 | ಹೆಚ್ಚಿದ ಸೌಲಭ್ಯಗಳು MOE: ರಾಷ್ಟ್ರೀಯ ಸಲಹಾ ಗುಂಪು (National Advisory Group), ಸಮೀಕ್ಷೆಗಳು, ಎನ್‌ಜಿಒಗಳ ಒಳಗೊಳ್ಳುವಿಕೆ |
| ವಿರಾಮ ಅವಧಿ | ಶಿಕ್ಷಣ ಆಯೋಗ, ರಾಷ್ಟ್ರೀಯ ನೀತಿ, ಐಇಡಿ |
| ನಾಲ್ಕನೇ ಯೋಜನೆ 1968-74 ಮತ್ತು ಐದನೇ ಯೋಜನೆ 1974-79 | ಎಂಎಸ್‌ಡಬ್ಲ್ಯೂನಲ್ಲಿ ಐಇಡಿ ಯೋಜನೆ, ಆಯ್ದ ಅನ್ವಯ |
| ಆರನೇ ಯೋಜನೆ 1980-85 | ಎಂ/ಎಚ್‌ಆರ್‌ಡಿಯಲ್ಲಿ ಐಇಡಿಸಿ ಯೋಜನೆ, ತಡೆಗಟ್ಟುವಿಕೆ ಏಕೀಕರಣ, ಮಾದರಿ ಸಮೀಕ್ಷೆಗಳು |
| ಏಳನೇ ಯೋಜನೆ 1985-90 | ಎನ್‌ಜಿಒಗಳು, ಮಹಿಳೆಯರು ಮತ್ತು ವೈಕಲ್ಯವುಳ್ಳವರು ಸಮಾನವಾಗಿ ಅನ್ವಯ |
| ರಾಷ್ಟ್ರೀಯ ನೀತಿ 1986, ಪಿಒಎ | ವೈಕಲ್ಯವುಳ್ಳವರಿಗೆ ಶಿಕ್ಷಣದ ಒಂದು ಅಧ್ಯಾಯ |
| ಎಂಟನೇ ಯೋಜನೆ 1992-97 | ಪಿಡಬ್ಲ್ಯೂಡಿ ಕಾಯ್ದೆ, ಆರ್‌ಸಿಐ, ಡಿಪಿಇಪಿ, ಮಾದರಿ ಸಮೀಕ್ಷೆ |
| ಒಂಬತ್ತನೇ ಯೋಜನೆ 1997-2002 | ಎಸ್‌ಎಸ್‌ಎ, ರಾಷ್ಟ್ರೀಯ ಟ್ರಸ್ಟ್, ಜನಗಣತಿ ಸಮೀಕ್ಷೆ, 86ನೇ ತಿದ್ದುಪಡಿ. ಎನ್‌ಎಸ್‌ಎಸ್‌ಒ 2002 |
| ಹತ್ತನೇ ಯೋಜನೆ 2002-2007 | ಮಾನಿಟರಿಂಗ್, ವಿಸ್ತರಣೆ, ಕಾನೂನು ಚೌಕಟ್ಟು, ಮೀಸಲಾತಿ, ಸಚಿವರ ಹೇಳಿಕೆ, ರಾಷ್ಟ್ರೀಯ ಕ್ರಿಯಾ ಯೋಜನೆಗಳು. ಅಸಮರ್ಥತೆ ಕುರಿತು ಸಮಗ್ರ ಯೋಜನೆ ತಯಾರಿಕೆಯಲ್ಲಿ (ಐಇಸಿವೈಡಿ) |

| | |
|---|---|
| ಹನ್ನೊಂದನೇ ಯೋಜನೆ 2008– 2012 | ಐಇಡಿಎಸ್ಎಸ್, ಆರ್‌ಎಂಎಸ್ಎ, ಆರ್ ಟಿ ಇ, ಪಿಡಬ್ಲ್ಯುಡಿ ಕಾಯಿದೆ ಪರಿಷ್ಕರಣೆ, ಪರಿಷ್ಕೃತ ಎಸ್‌ಎಸ್‌ಎ ಫ್ರೇಮ್‌ವರ್ಕ್, ಎನ್‌ಸಿಪಿಸಿಆರ್, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇಒಒಗಳು, ಅಸಮರ್ಥತೆಯ ಅಧ್ಯಯನಗಳು |
| ಹನ್ನೆರಡನೇ ಯೋಜನೆ 2012–17 | ಆರ್‌ಟಿಇ 2009ಕ್ಕೆ 2012ರ ತಿದ್ದುಪಡಿ, ಆರ್ ಪಿಡಬ್ಲ್ಯೂಡಿ ಕಾಯ್ದೆ, 2016 ಮತ್ತು ಅನುಸರಣಾ ಅಧಿಸೂಚನೆಗಳು |
| 2017ರ ತರುವಾಯ | ನೀತಿ ಆಯೋಗ, ಮೂರು ವರ್ಷದ ಕ್ರಿಯಾ ಕಾರ್ಯಸೂಚಿ (2017–18 ರಿಂದ 2019–20) ಎಸ್‌ಎಸ್‌ಎ ಮತ್ತು ಆರ್‌ಎಂಎಸ್‌ಎ ಸೇರಿಸಿ ಸಮಗ್ರ ಶಿಕ್ಷಣ ಯೋಜನೆ, ಆರ್‌ಟಿಇ ಮತ್ತು ವಿಶೇಷ ಶಾಲೆಗಳ ಆಯ್ಕೆ (ಆರ್‌ಪಿಡಬ್ಲ್ಯುಡಿ, 2018) |
| ರಾಷ್ಟ್ರೀಯ ಕರಡು ಶಿಕ್ಷಣ ನೀತಿ, 2019 | 2019 ರ ಸೆಪ್ಟೆಂಬರ್20 ರಂದು CABEನಲ್ಲಿ ಮಂಡಿಸಲಾಯಿತು. 5 + 3 + 3 + 4ರ ಮೇಲೆ ಒತ್ತು (12 ವರ್ಷಗಳ ಶಾಲಾ ಶಿಕ್ಷಣದ ಬದಲಾಗಿ ಮತ್ತು ಪ್ರಾಥಮಿಕ ಪೂರ್ವ ಹಾಗು 1 ಮತ್ತು 2 ಗ್ರೇಡುಗಳನ್ನು 5 ವರ್ಷಗಳ ಫೌಂಡೇಶನಲ್ ಲರ್ನಿಂಗ್ ಆಗಿ ಒಳಗೊಂಡಿದೆ) ಮತ್ತು ಯುಆರ್‌ಜಿಯ ಭಾಗವಾಗಿ ಅಸಮರ್ಥತೆ;<br>ಮಂಡಳಿಯ ಆದ್ಯಂತ ಸಮನ್ವಯ: MCI, AICTE, NCTE, RCI ಮತ್ತಿತರ ನಿಯಂತ್ರಕ ಮಂಡಳಿಗಳ ಬದಲಾಗುವ ಸ್ವರೂಪ. |

ಮೂಲ: ತಮ್ಮ ಅಧ್ಯಾಯಗಳನ್ನು ಆಧರಿಸಿ ಸುದೇಶ್ ಮುಖೋಪಾಧ್ಯಾಯ, 2018 ಅವರು ಅಭಿವೃದ್ಧಿ ಪಡಿಸಿದ್ದಾರೆ.
ಗಮನಿಸಿ: ಸಮನ್ವಯ ಶಿಕ್ಷಣದ ಬಗ್ಗೆ ಕೆಲವು ಮೈಲುಗಲ್ಲುಗಳನ್ನು ಉಲ್ಲೇಖಿಸಲಾಗಿದೆ; ಅನೇಕ ಇತರ ಕಾಯಿದೆಗಳು ತಮ್ಮ ಕಾರ್ಯಕ್ರಮ ಮತ್ತು ಯೋಜನೆಗಳಲ್ಲಿ ವ್ಯಕ್ತವಾಗಿ ಹೇಳದೇ ಇದ್ದರೂ ವೈಕಲ್ಯತೆಯ ಬಗ್ಗೆ ಗಮನ ಹರಿಸಿರುವುದರಿಂದ ಕೆಲವು ಬಿಟ್ಟು ಹೋಗಿರಬಹುದು.

ಒಡಂಬಡಿಕೆಯಲ್ಲಿ (UN Convention on the Rights of Persons with Disabilities-UNCRPD, 2006)) ಎತ್ತಿಹಿಡಿಯಲಾಗಿದೆ. ಸಮನ್ವಯ ಮತ್ತು ವಿಶೇಷ ಶಿಕ್ಷಣಗಳೆರಡರ ವ್ಯವಸ್ಥೆಗಳಲ್ಲಿ ಶಿಕ್ಷಣದ ಗುಣಮಟ್ಟ ಇನ್ನೂ ಸುಧಾರಣೆ ಆಗಬೇಕಾಗಿದೆ ಎಂಬ ನಿರ್ಧಾರಣೆಯನ್ನು ಪ್ರಸಂಗಗಳ ಆಧಾರದ ಮೇಲೆ ಹೇಳಲಾಗಿದೆಯೇ ಹೊರತು ವ್ಯಾಪಕ ಸಂಶೋಧನೆಯ ಮೇಲೆ ಅದು ಆಧಾರಿತವಾಗಿಲ್ಲ ಮತ್ತು ಪರ್ಯಾಯ ವಿಧಾನಗಳ ಪರಿಣಾಮಕಾರಿತ್ವದ ಮೇಲೆ ಇನ್ನೂ ಸಂಶೋಧನೆಗಳು ಗಮನಹರಿಸಿಲ್ಲ.

ಈಗಾಗಲೇ ಸಿಬಿಎಸ್ಇ 'ಜೀವನ ಕೌಶಲ್ಯವನ್ನು' ಕುರಿತು ಮಾತನಾಡಲು ಪ್ರಾರಂಭಿಸಿದೆ ಮತ್ತು ಎನ್ಇಪಿ (2019)ನ ಇತ್ತೀಚಿನ ಆವೃತ್ತಿಯು ಕೂಡ ಇದರ ಬಗ್ಗೆ ಉಲ್ಲೇಖಿಸುತ್ತದೆ. ವಿಶೇಷ ಶಾಲೆಗಳ ವಿಕಲತೆಯುಳ್ಳ ಮಕ್ಕಳ 'ಹೆಚ್ಚುವರಿ / ಪುಷ್ಟೀಕರಣ ಪಠ್ಯಕ್ರಮ' ('Plus/Enrichment Curriculum') ಕೂಡ ಜೀವನ ಕೌಶಲ್ಯಗಳನ್ನು ಕುರಿತದ್ದಾಗಿದೆ ಎಂಬುದನ್ನು ಗಮನಿಸಬೇಕು. ಕೌಶಲ್ಯ ಮಂಡಳಿಯು ಸಹ ತನ್ನ ಕಾರ್ಯಸೂಚಿಯಲ್ಲಿ ಇದನ್ನು ಹೊಂದಿದೆ. ಎನ್‌ಸಿಇಆರ್‌ಟಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು– 2020 (National Curriculum Framework 2020) ಅನ್ನು ರೂಪಿಸುವಾಗ ಇದರತ್ತ ಗಮನಹರಿಸಬೇಕಾಗಿದೆ.

**ಕಾನೂನು ನಿಬಂಧನೆಗಳಿಂದ ಕಲಿಕೆ**

ಇಂದು ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣವು ಸರ್ಕಾರದ ಪ್ರಮುಖ ಜವಾಬ್ದಾರಿಗಳಲ್ಲೊಂದು. ಭಾರತದಲ್ಲಿ ನಾವು 1974ರಿಂದ ಸಮಾಜ ಕಲ್ಯಾಣ ಸಚಿವಾಲಯದ (ಈಗ ಇದನ್ನು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಎಂದು ಕರೆಯಲಾಗುತ್ತದೆ) ಮೂಲಕ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ. ಆಯೋಗಗಳ, ಪಂಚವಾರ್ಷಿಕ ಯೋಜನೆಗಳ ಮತ್ತು ತದನಂತರದ ಸಂಸತ್ತು ಜಾರಿಗೆತಂದ ಕಾಯಿದೆಗಳಲ್ಲಿ ಈ ಬೆಳವಣಿಗೆಗಳನ್ನು ಕುರಿತು ಒಂದು ಚಿತ್ರವನ್ನು ಒದಗಿಸುತ್ತವೆ. ಈ ಬೆಳವಣಿಗೆಗಳನ್ನು ಈ ಕೆಳಗಿನಂತೆ ಸಂಕ್ಷಿಪ್ತಗೊಳಿಸಬಹುದು:

ಸ್ವಾತಂತ್ರ್ಯದ ನಂತರ ಭಾರತದಲ್ಲಿ ಸಮನ್ವಯ ಶಿಕ್ಷಣದತ್ತ ನಡೆದ ಪ್ರಯತ್ನಗಳ ಬಗ್ಗೆ ಈ ಕೋಷ್ಟಕವು ತೋರಿಸುತ್ತದೆ. ಸಮನ್ವಯ ಶಿಕ್ಷಣವೆಂಬುದು ಭಾರತವೂ ಸೇರಿದಂತೆ ಎಲ್ಲಾ ದೇಶಗಳಲ್ಲಿ ವಿಕಾಸಗೊಳ್ಳುತ್ತಿರುವ ಒಂದು ಪ್ರಕ್ರಿಯೆಯಾದರೂ ಈಗ ಒಂದು ಜನಪ್ರಿಯವಾದ ಪದವಾಗಿದೆ.

ಸಬಲೀಕರಣ ನೀತಿಗಳು ಮತ್ತು ಶಾಸನಗಳ ಪರಿಣಾಮವಾಗಿ, ಎಲ್ಲ ರಾಜ್ಯಗಳಲ್ಲಿ ನ್ಯಾಯಾಲಯದ ಪ್ರಕರಣಗಳು ಜಾಸ್ತಿಯಾಗಿ ಸುಪ್ರೀಂ ಕೋರ್ಟ್‌ನವರೆಗೆ ಹೋಗಿವೆ. ಇದು ಕಾರ್ಯನೀತಿ ರಚಿಸುವುದಕ್ಕೂ ಮತ್ತು ಅವನ್ನು ಅನುಷ್ಠಾನಕ್ಕೆ ತರುವವರೆಗೂ ಅಂದರೆ ಸದುದ್ದೇಶದ ಸಾಕಾರದವರೆಗೂ ನಡುವೆ ಇರುವ ಕೊರತೆಗಳು ಮತ್ತು ಸವಾಲುಗಳನ್ನು ಸೂಚಿಸುತ್ತದೆ.[3] ಮಕ್ಕಳನ್ನು ಅನುತ್ತೀರ್ಣ ಮಾಡಿ ಹಿಂದಿನ ತರಗತಿಯಲ್ಲಿಯೇ ಉಳಿಸಿಕೊಳ್ಳಬಾರದು ಎಂಬ ಆರ್‌ಟಿಇ ಕಾಯ್ದೆ (2009)ರ ಖಂಡ 16ನ್ನು 2017ರಲ್ಲಿ ತಿದ್ದುಪಡಿ ಮಾಡಲಾಗಿದೆ. ಈ ಕಾನೂನು ಉಪಬಂಧವನ್ನು ತೆಗೆದುಹಾಕಿದರೆ ಇದು ಎಲ್ಲಾ ದುರ್ಬಲ ಮಕ್ಕಳ ಮೇಲೆ ಗಂಭೀರ ಪರಿಣಾಮ ಬೀರಬಲ್ಲದು. ಏಕೆಂದರೆ ಶಾಲಾ ವ್ಯವಸ್ಥೆಯು ಸ್ವಯಂ ಮೇಲ್ವಿಚಾರಕವಲ್ಲ ಅಥವಾ ಈಗ ವಿಶೇಷ ಅಗತ್ಯವುಳ್ಳವರನ್ನೂ ಒಳಗೊಂಡ ಕಾರಣ ಆರ್‌ಟಿಇ ಕಾಯ್ದೆ (2009)ರ ಅಡಿಯಲ್ಲಿ ಕಲ್ಪಿಸಲಾದ ನೆರವು ನೀಡುವ ಬಗ್ಗೆ ಶಾಲೆಗಳೂ ಉತ್ತರದಾಯಿಗಳಾಗಿರುವುದಿಲ್ಲ.

ಕಾನೂನು ಉಪಬಂಧಗಳ ಹಿನ್ನೆಲೆಯಲ್ಲಿ ಮತ್ತು ಈಗ ರಾಷ್ಟ್ರೀಯ ಕರಡು ಶಿಕ್ಷಣ ನೀತಿ 2019ರಲ್ಲಿ ವ್ಯಕ್ತವಾಗಿರುವ ಉದ್ದೇಶದ ಅಡಿಯಲ್ಲಿ ಎಲ್ಲಾ ನೀತಿ–ನಿರೂಪಕರು, ಯೋಜಕರು, ಅನುಷ್ಠಾನಕಾರರು ಮತ್ತು ಹಿತಾಸಕ್ತಿದಾರರು, ವಿಕಲತೆವುಳ್ಳವರೂ ಸೇರಿದಂತೆ ಸಮಾಜದ ಎಲ್ಲ ವರ್ಗಗಳ ಜನರಿಗೂ ಅವಕಾಶಗಳ ಸಮಾನತೆ, ಆರ್ಥಿಕ ಮತ್ತು ಸಾಮಾಜಿಕ ಚಲನಶೀಲತೆ ಒಳಗೊಳ್ಳುವಂತೆ ಸಮನ್ವಯದ ದೃಷ್ಟಿಯನ್ನು ವಿಸ್ತರಿಸುವುದು ಬಹು ಮುಖ್ಯ. ಸೀನಿಯರ್ ಸೆಕೆಂಡರಿಯವರೆಗೆ ಶಾಲಾ ಶಿಕ್ಷಣವು ಮುಖ್ಯ ಹಾಗೂ ಶಿಫಾರಸ್ಸಾದ ವಿಷಯವಾಗಿದೆ.ಆದರೆ 14 ವರ್ಷದವರೆಗಿನ ಪ್ರಾರಂಭದ ವರ್ಷಗಳ ಶಾಲಾ ಶಿಕ್ಷಣದ ಪ್ರಾಮುಖ್ಯತೆಯನ್ನು

ಕಡೆಗಣಿಸಲಾಗುವುದಿಲ್ಲ ಅಥವಾ ಅದಕ್ಕೆ ಅತಿಯಾಗಿ ಒತ್ತು ನೀಡಲೂ ಆಗುವುದಿಲ್ಲ. ಶಿಕ್ಷಣವು ಸಂವಿಧಾನದ ಸಹವರ್ತಿ ಪಟ್ಟಿಯಲ್ಲಿದ್ದು, ವಿಕಲತೆಯು ರಾಜ್ಯಗಳ ಪಟ್ಟಿಯ ವಿಷಯವಾಗಿದೆ. ಹೀಗಾಗಿ ನಾವು ರಾಷ್ಟ್ರೀಯ ನೀತಿಯನ್ನು ಕ್ರಮಕೈಗೊಳ್ಳಬಹುದಾದ ಅನುಷ್ಠಾನ–ಗೊಳಿಸುವ ಉಪಬಂಧವಾಗಿ ಪರಿವರ್ತಿಸುವುದರ ಪರಿಣಾಮವನ್ನು ಅರ್ಥಮಾಡಿಕೊಳ್ಳಬೇಕು. ಸಂಬಂಧಿತ ಆದೇಶಗಳು ಮತ್ತು ಆಡಳಿತ ಕ್ರಮಗಳು ಯಾವಾಗಲೂ ರಾಜ್ಯಗಳ ಅಧೀನದಲ್ಲಿರುತ್ತವೆ. ಸಿಎಸ್‌ಆರ್ ಮತ್ತು ಸಾರ್ವಜನಿಕ–ಖಾಸಗಿ ಸಹಭಾಗಿತ್ವವನ್ನು ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ಅರ್ಥಮಾಡಿ–ಕೊಳ್ಳಬೇಕಾಗಿದೆ. ಏಕೆಂದರೆ ಮಾರುಕಟ್ಟೆ ಆರ್ಥಿಕತೆಯು ಅಂತಾರಾಷ್ಟ್ರೀಯ ಏಜೆನ್ಸಿಗಳಾದ ಯುನೆಸ್ಕೋ ಮತ್ತು ಯುನಿಸೆಫ್‌ಗಳಿಂದ ಬರುವ ಹಣದ ಹರಿವಿನ ಮೇಲೆ ಪ್ರಭಾವ ಬೀರಿದೆ.

**ಮಾನವ ಸಂಪನ್ಮೂಲಗಳ ಸವಾಲು**

ವಿಶೇಷ ಮತ್ತು ಸಮನ್ವಯ ಶಿಕ್ಷಣಗಳೆರಡರ ಪ್ರಾರಂಭದಿಂದಲೂ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಸಶಕ್ತಗೊಳಿಸುವುದಕ್ಕಾಗಿ ಮಾನವ ಸಂಪನ್ಮೂಲಗಳ ಲಭ್ಯತೆ ಮತ್ತು ನಿರಂತರವಾಗಿ ಅವರ ಸಾಮರ್ಥ್ಯ ವರ್ಧನೆ ಮಾಡುವುದು ನಿರ್ಣಾಯಕ ವಿಷಯವಾಗಿದೆ. ಶಿಕ್ಷಣದ ಗುಣಮಟ್ಟವನ್ನು ಯೋಜಿತ ಪ್ರಯತ್ನ, ಸಾಕಷ್ಟು ಸಂಖ್ಯೆಯ ವೃತ್ತಿಪರವಾಗಿ ಸಮರ್ಥರಾದ ಸಿಬ್ಬಂದಿ ಅಥವಾ ಮಾನವ ಸಂಪನ್ಮೂಲದ ಮೂಲಕ ಮಾತ್ರ ಒದಗಿಸಬಹುದು ಅಥವಾ ಹೆಚ್ಚಿಸಬಹುದು. ಶಾಲೆಗಳಲ್ಲಿ ಸಿಬ್ಬಂದಿಗಳ ಸಂಖ್ಯೆಯನ್ನು ಕನಿಷ್ಠ ಅಗತ್ಯದ ಆಧಾರದ ಮೇಲೆ ನಿರ್ಧರಿಸದೆವಾಸ್ತವ ಅಗತ್ಯದ ಆಧಾರದ ಮೇಲೆ ನಿರ್ಧರಿಸಬೇಕಾಗಿದೆ. ಆರ್‌ಟಿಇ ಕಾಯ್ದೆ ಈ ವಾಸ್ತವವನ್ನು ಗುರುತಿಸಬೇಕು ಮತ್ತು ಶಿಕ್ಷಕರು, ವಿಶೇಷ ಶಿಕ್ಷಕರು ಮತ್ತು ಇತರ ವೃತ್ತಿಪರರ ನೇಮಕಾತಿಯು ಹಠಾತ್ ನಿರ್ಧಾರಗಳ ಅಥವಾ ತಾತ್ಕಾಲಿಕ ನಿರ್ಧಾರದ ಕೈವಶವಾಗುವಂತೆ ಮಾಡಬಾರದು ಎಂಬುದನ್ನು ಗುರುತಿಸಬೇಕು.

**ಈಗಿನ ಸವಾಲೆಂದರೆ :**
**ನಮ್ಮಲ್ಲಿ ಸಾಕಷ್ಟು ಸೇವಾ ಪೂರೈಕೆದಾರರು ಇದ್ದಾರೆಯೇ?**

ನಾವು ಬಳಸುವ ಹೆಸರನ್ನು ಕೂಡ ನೋಡಬೇಕೇ? ಉದಾಹರಣೆಗೆ ವಿಶೇಷ ಶಾಲೆಗಳನ್ನು ವಿಶೇಷ ಸೇವೆಗಳನ್ನು ನೀಡುವ ಶಾಲೆಗಳೆಂದು ನಾವು ನೋಡಿದರೆ ಇವು ವಿಶೇಷ ಉದ್ದೇಶಕ್ಕಾಗಿ ಸ್ಥಾಪಿಸಲಾದ ವಿಶೇಷ ಶಾಲೆಗಳಾಗುತ್ತವೆ. ಅಂದರೆ, ನವೋದಯ ವಿದ್ಯಾಲಯಗಳು, ಕೇಂದ್ರೀಯ ವಿದ್ಯಾಲಯಗಳು ಮತ್ತು ಸೈನಿಕ ಶಾಲೆಗಳ ಮಾದರಿಯ ಶಾಲೆಗಳು.

ಹಾಗೆಯೇ ನಾವು ಕೆಲವು ಮಕ್ಕಳಿಗೆ ಅಗತ್ಯವಿರುವ ವಿಶೇಷ ಬೆಂಬಲವನ್ನು ಒದಗಿಸಲು ಹೇಗೆ ಯೋಜಿಸುತ್ತೇವೆ? ನಾವು ಸ್ಥಳ, ಸಾಮಾಜಿಕ ಪರಿಸರ, ಆರೋಗ್ಯ, ಹುಟ್ಟಿದಾಗಿನಿಂದ ಇರುವಂತಹ ವಿಕಲತೆಯ ಪರಿಸ್ಥಿತಿಗಳು, ಅಪಘಾತಗಳು ಮತ್ತು ವ್ಯಕ್ತಿಯ ಜೀವನದಲ್ಲಿ ಅಂತಹ ಇತರ ಬೆಳವಣಿಗೆಗಳಿಂದಾದ ಅಸಮರ್ಥ ಸ್ಥಿತಿಯಿಂದ ಉಂಟಾದ ಸಂದರ್ಭಗಳನ್ನು ಅಧ್ಯಯನ ಮಾಡುವ, ವಿಶ್ಲೇಷಣೆ ಮಾಡುವ, ಸಂಶೋಧನೆ ಮಾಡುವ ಮತ್ತು ದಾಖಲಿಸುವ ಅಗತ್ಯವಿದೆ.[4]

ವರದಿ ಮಾಡುವ ಏಜೆನ್ಸಿಗಳು ಬಿಡುಗಡೆ ಮಾಡಿದ ವಿಕಲತೆ ಆಧಾರದ ಮಾಹಿತಿಯು ಸೇವೆಗಳು ಮತ್ತು ಸಂಪನ್ಮೂಲಗಳಿಗಾಗಿ ಯೋಜನೆ ರೂಪಿಸಲು ಪರಿಗಣಿಸಬೇಕಾದ ಪ್ರಶ್ನೆಗಳನ್ನು ಒದಗಿಸುತ್ತವೆ. ನರವ್ಯೂಹ ಮತ್ತು ಸಂವೇದನಾ ಕ್ರಿಯೆಗಳ ವಿಕಲತೆಯಿರುವ (Neurological and sensory disabilities) ಮಕ್ಕಳು ಶಾಲಾ ಸೌಲಭ್ಯಗಳು ಮತ್ತು ಸೇವೆಗಳಿಗೆ ದಾಖಲಾತಿ ಹೊಂದಲು ಸೂಕ್ತ ಆರೋಗ್ಯ ಸ್ಥಿತಿನಿರ್ಧರಣೆ ಮತ್ತು ಕಲಿಕೆಗಾಗಿ ಅವರನ್ನು ಸಶಕ್ತಗೊಳಿಸುವ ಚಿಕಿತ್ಸೆ ಪಡೆಯುವ ಕೆಲವು ಗಮನಾರ್ಹ ಸಮಸ್ಯೆಯನ್ನು ಎದುರಿಸುತ್ತಾರೆ, ಈಗಿರುವಂತೆ ಅವರ ಕಲಿಕಾ ಫಲಿತಾಂಶಗಳ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಬೇರೆಬೇರೆ ಮಕ್ಕಳಿಗೆ ಬೇರೆಬೇರೆ ಅಗತ್ಯಗಳಿವೆ. ಉದಾಹರಣೆಗೆ, ಮೂಳೆ ಸಮಸ್ಯೆಗಳು, ಸಿಪಿ ಮತ್ತು ಬಹು ವಿಕಲತೆಗಳು. ಹಾಗೂ ಪ್ರತಿಯೊಬ್ಬ ಮಗುವಿಗೂ ಭಿನ್ನವಾದ ಕಲಿಕಾ ವಿಧಾನಗಳಿರುತ್ತವೆ. ನಾವು ಒಂದೇ ಫಲಿತಾಂಶವನ್ನು ಕಂಡುಕೊಳ್ಳಲು ಪ್ರಯತ್ನಿಸುವುದು ಮುಖ್ಯವಾದರೂ ಕಲಿಕಾ ವೇಗ, ಬೋಧನಾ ವಿಧಾನ, ನೆರವು, ಪರಿಹಾರವಲ್ಲದ ಸಂವರ್ಧನಾ ಪ್ರಯತ್ನಗಳು ಬೇರೆ ಬೇರೆಯಾಗಿರುತ್ತವೆ ಎಂಬುದನ್ನು ಮರೆಯಬಾರದು. ಇದು ಕಲಿಕೆಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ತನ್ಮೂಲಕ, ನಿರ್ಧಾರಣೆ ಕಾರ್ಯವಿಧಾನಗಳು ಮತ್ತು ಪಠ್ಯಕ್ರಮ ರಚನೆಯನ್ನು ಮಾಡಬೇಕಾಗುತ್ತದೆ.

**ವಿಶೇಷ ಶಿಕ್ಷಣ ಶಾಲೆಗಳು – ಸಮನ್ವಯದ ಮುಂದುವರಿಕೆಗಳು**

ಸಮನ್ವಯ ಶಿಕ್ಷಣವು ಈ ಹಿಂದೆ ಇದ್ದ ವಿಲೀನ ಮತ್ತು ಮುಖ್ಯವಾಹಿನಿಗೆ ಸೇರಿಸಿಕೊಳ್ಳುವ ವಿಚಾರಗಳಿಗಿಂತ ಬೇರೆಯಾಗಿದೆ. ಈ ಹಿಂದಿನ ವಿಚಾರಧಾರೆಯು ಪ್ರಾಥಮಿಕವಾಗಿ ವಿಕಲತೆ ಮತ್ತು ವಿಶೇಷ ಶಿಕ್ಷಣದ ಅಗತ್ಯತೆಗಳಿಗೆ ಸಂಬಂಧಿಸಿರುತ್ತದೆ ಮತ್ತು ಕಲಿಯುವ ಮಕ್ಕಳು ಮುಖ್ಯವಾಹಿನಿ ಶಾಲೆಗಳಿಗೆ ಸೇರುವುದಕ್ಕೆ ತಕ್ಕಂತೆ ಮಾರ್ಪಾಡಾಗುವ ಅಥವಾ ಸಿದ್ಧರಾಗುವುದನ್ನು (ಅಥವಾ ಅರ್ಹರಾಗುವುದನ್ನು) ಇದು ಸೂಚಿಸುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ಸಮನ್ವಯ ಶಿಕ್ಷಣವು ಎಲ್ಲರೊಡನೆ ಸೇರಿ ಕಲಿಯುವ ಮಗುವಿನ ಹಕ್ಕು ಮತ್ತು ಮಗುವನ್ನು ಅಂಗೀಕರಿಸಿ ಸ್ಪಂದಿಸಬೇಕಾದ ಶಾಲೆಯ ಕರ್ತವ್ಯವನ್ನು ಕುರಿತದ್ದಾಗಿದೆ.

ಸಮನ್ವಯ ಶಿಕ್ಷಣದ ಪರಿಕಲ್ಪನೆಯು ವಿಶೇಷ ಶಾಲೆಗಳ ಅಥವಾ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳನ್ನು ಇತರೆ ಸಾಮಾನ್ಯ ವಿದ್ಯಾರ್ಥಿಗಳಿಂದ ಪ್ರತ್ಯೇಕಿಸಲು ಬೇರೆತರಗತಿ ನಡೆಸುವುದನ್ನು ತಿರಸ್ಕರಿಸುತ್ತದೆ. ಹಕ್ಕು ಆಧಾರಿತ ಧೋರಣೆಯು ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳ ಪೂರ್ಣ ಭಾಗವಹಿಸುವಿಕೆಗೆ ಮತ್ತು ಅವರ ಸಾಮಾಜಿಕ, ನಾಗರಿಕ ಮತ್ತು ಶಿಕ್ಷಣ ಹಕ್ಕುಗಳನ್ನು ಗೌರವಿಸುವುದಕ್ಕೆ ಒತ್ತು ನೀಡುತ್ತದೆ. ಈ ಎರಡೂ ಅಂಶಗಳನ್ನು ತೆಗೆದುಕೊಳ್ಳುತ್ತಾ RPWD ಕಾಯ್ದೆ 2016ರಲ್ಲಿನ ಉದ್ದೇಶ ಮತ್ತು ನಿಬಂಧನೆಗಳ ಪ್ರಕಾರ, ಶಾಲೆಗಳು ಅಂಗೀಕರಿಸಲ್ಪಟ್ಟ 'ಸಾಮಾನ್ಯ ಶಿಕ್ಷಣ ಮತ್ತು ವಿಶೇಷ ಶಿಕ್ಷಣ ಕಾರ್ಯಕ್ರಮಗಳು' ಎಂಬ ಪದಗಳ ನಡುವೆ ವ್ಯತ್ಯಾಸವನ್ನು ಮಾಡಬಾರದು. ಬದಲಾಗಿ, ಶಾಲೆಯ ಪ್ರಕ್ರಿಯೆಗಳು ವಿಶೇಷ ಶಾಲೆಗಳಾಗಲು ಅವಕಾಶದೊಂದಿಗೆ ಎಲ್ಲಾ ವಿದ್ಯಾರ್ಥಿಗಳು ಒಟ್ಟಿಗೆ ಕಲಿಯುವಂತೆ ರಚಿತವಾಗಿರಬೇಕು5.

ನಾವು ಹಕ್ಕುಗಳನ್ನು ತಡೆಯುವವರಲ್ಲ, ಸುಗಮಗೊಳಿಸುವವರು! ನಾವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಾಗಿ ಆಯ್ಕೆಗಳನ್ನು ನಿರ್ವಹಿಸುವ ಹಕ್ಕನ್ನು ಗೌರವಿಸುತ್ತಿದ್ದೇವೆ ಎಂದು ಹೇಳಬಹುದೇ? ಭರವಸೆಯಿಂದ ನಾವು ಎಲ್ಲಾ ಶಾಲೆಗಳು ಸಮನ್ವಯ ಶಿಕ್ಷಣ ನೀಡುತ್ತವೆ ಮತ್ತು ಎಲ್ಲಾ ವಿಶೇಷ ಶಾಲೆಗಳು ಆರ್‌ಟಿಇ ಕಾಯ್ದೆಯ ಮಾನದಂಡಗಳನ್ನು ಪೂರೈಸುತ್ತವೆ ಎಂದು ಹೇಳಬಹುದೇ? ಇದು ವ್ಯವಸ್ಥೆಯು ಪರಿಗಣಿಸಲೇಬೇಕಾದ ಪ್ರಮುಖ ಪ್ರಶ್ನೆಯಾಗಿದೆ. ಏಕೆಂದರೆ RPWD ಶಾಲಾ ಶಿಕ್ಷಣದ ಹಕ್ಕನ್ನು ಮಾತ್ರವಲ್ಲ, ವಿಶೇಷ ಶಾಲೆಗಳನ್ನು ಆಯ್ಕೆಮಾಡುವಹಕ್ಕನ್ನೂ ನೀಡುತ್ತದೆ. ಮಾನವ

ಸಂಪನ್ಮೂಲ ಸಚಿವಾಲಯವೂ ವಿಕಲತೆಯುಳ್ಳ ಮಕ್ಕಳ ಶಿಕ್ಷಣದ ಬಗ್ಗೆ ಕೂಡ ಗಮನಹರಿಸಬೇಕೆಂದು ನೀತಿ ಆಯೋಗವು ನಿರೀಕ್ಷಿಸುತ್ತದೆ.

ಆದ್ದರಿಂದ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರತಿಕ್ರಿಯೆಯು ನಮ್ಮ ಸಮನ್ವಯ ಶಿಕ್ಷಣದ ಮಾರ್ಗದಲ್ಲಿ ಮತ್ತು ಸಮನ್ವಯ ಶಾಲೆಗಳು, ವಿಶೇಷ ಶಾಲೆಗಳು, ವಿಶೇಷ ಸೇವೆಗಳ ಶಾಲೆಗಳು ಎಂಬ ಹಣೆಪಟ್ಟಿ ಇಲ್ಲದೆಯೇ ಶಾಲೆ ನಡೆಸುವ ನಿಟ್ಟಿನಲ್ಲಿ ನಾವು ಎಷ್ಟು ಮುಂದುವರೆಯುತ್ತೇವೆಂಬುದನ್ನು ನಿರ್ಧರಿಸುತ್ತವೆ. ಸೆಪ್ಟೆಂಬರ್ 2019ರ CABEನ ಮತ್ತು ಎನ್‌ಪಿಎ 2019ಗಳ ಫಲಿತಾಂಶಗಳು ಈ ಎಲ್ಲದರ ಮೇಲೆ ಪರಿಣಾಮ ಬೀರಲಿವೆ.

**ಶಿಕ್ಷಕರ ಸಿದ್ಧತೆ ಮತ್ತು ನಿರ್ವಹಣೆ**

ಸೇವಾ ಪೂರ್ವ ಶಿಕ್ಷಕರ ಸಿದ್ಧತೆ ಬಹಳ ನಿರ್ಣಾಯಕವಾದದ್ದು. ಎನ್‌ಸಿಟಿಇ ಎಲ್ಲಾ ಶಿಕ್ಷಕರಿಗೆ ನಿಯಂತ್ರಕ ಸಂಸ್ಥೆಯಾಗಿದೆ, ಎನ್‌ಸಿಟಿಇಗೂ ಮೊದಲು ಸಂಸತ್ತಿನ ಕಾಯಿದೆಯಿಂದ ರೂಪಿಸಲಾದ ಪುನರ್ವಸತಿ ಕೌನ್ಸಿಲ್ ಆಫ್ ಇಂಡಿಯಾ (ಆರ್‌ಸಿಐ, RCI) ವಿಶೇಷ ಶಿಕ್ಷಕರ ತರಬೇತಿಯನ್ನು ನಿಯಂತ್ರಿಸುತ್ತದೆ. NCTE 2014ರ ಎರಡು ವರ್ಷದ ಬಿಎಡ್ ಮತ್ತು ಎಂಎಡ್ ಕೋರ್ಸ್‌ಗಳ ಅಧಿಸೂಚನೆಯ ತರುವಾಯ 2015ರಲ್ಲಿ, RCI ತನ್ನ ಪಠ್ಯಕ್ರಮವನ್ನು ಎರಡು ವರ್ಷಗಳ ಕೋರ್ಸ್ ಆಗಿ ನವೀಕರಿಸಿತು ಮತ್ತು ಆ ಮೂಲಕ ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ಸಾಮಾನ್ಯ ಮತ್ತು ವಿಶೇಷ ಶಾಲೆಗಳಿಗೆ ಶಿಕ್ಷಕರನ್ನು ತಯಾರಿಸಲು ಸಜ್ಜಾಗಿದೆ. ಇಲ್ಲಿ ಸಾಮಾನ್ಯ ಶಾಲಾ ವಿಷಯಗಳ ಶಿಕ್ಷಣದ ಜೊತೆಗೆ ಇದು ಅನೇಕ ಅಸಮರ್ಥತೆಗಳ ಬಗ್ಗೆ ಕಲಿಸುತ್ತಾ ಎರಡು ಅಸಮರ್ಥತೆಗಳಲ್ಲಿ ಪರಿಣಿತಿಯನ್ನು ನೀಡುತ್ತದೆ.

ಹೀಗಿದ್ದರೂ, NCTE ವಿಶೇಷ ಶಿಕ್ಷಣದಲ್ಲಿ RCIನ ಡಿಪ್ಲೊಮಾ ಮತ್ತು ಪದವಿ ಇವೆರಡರ ಅರ್ಹತೆಯನ್ನು ಪ್ರಾಥಮಿಕ ಹಂತದವರೆಗೆ ಮಾತ್ರಸ್ವೀಕರಿಸುತ್ತದೆ. ಇದರಿಂದಾಗಿ, ಶಾಲೆಗಳಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸೇವೆಸಲ್ಲಿಸಲು ಸೂಕ್ತ ಹಾಗೂ ಸಾಕಷ್ಟು ಸಂಖ್ಯೆಯ ವೃತ್ತಿಪರರು ಇಲ್ಲ, ಏಕೆಂದರೆ ಇವರು ವೃತ್ತಿಯಲ್ಲಿ ಯಾವುದೇ ಪ್ರಗತಿ ಕಾಣದ ಕಡಿಮೆ ಸಂಬಳದ ಗುತ್ತಿಗೆ ಶಿಕ್ಷಕರು.

**ಶಿಕ್ಷಕ ಶಿಕ್ಷಣವನ್ನು ಕುರಿತ ವಿಚಾರದೃಷ್ಟಿ ಮತ್ತು ಸವಾಲುಗಳು (ಡಿಎನ್‌ಇಪಿ 2019)**

ಮಕ್ಕಳ ರಾಷ್ಟ್ರೀಯ ನೀತಿಯು (2013) (National Policy on Children -2013) ಶಿಕ್ಷಣವೂ ಸೇರಿದಂತೆ ಸೇವಾ ಪೂರೈಕೆದಾರರು ಯಾವ ಪಾತ್ರವನ್ನುವಹಿಸಬೇಕೆಂಬ ನಿರೀಕ್ಷೆ ಇದೆ ಎಂಬ ವಿವರಗಳನ್ನು ನೀಡುತ್ತದೆ. 3–18 ವರ್ಷದ ವಯೋಮಾನದ ಗುಂಪಿನವರಿಗೆ ಸಂಬಂಧಿಸಿದಂತೆ ಮಾನವಶಕ್ತಿಯ ಅವಶ್ಯಕತೆಗಳು ಮತ್ತು ಶಾಸನಬದ್ಧ ಸಂಸ್ಥೆಗಳ ಸಂಬಂಧಿತ ಪಾತ್ರವನ್ನೂ ಕುರಿತು ನೋಡಬೇಕಾದ ಅವಶ್ಯಕತೆಯಿದೆ. ಆಯಾ ಸಚಿವಾಲಯಗಳು ತಾತ್ಕಾಲಿಕ ಮತ್ತು ಪ್ರತ್ಯೇಕಿತ ಅಧಿಸೂಚನೆಗಳನ್ನು ಹೊರಡಿಸಿದರೆ ಅದು ಅವ್ಯವಸ್ಥೆಗೆ ಮತ್ತು ನೀತಿಯ ಕಳಪೆ ಅನುಷ್ಠಾನಕ್ಕೆ ಕಾರಣವಾಗುತ್ತವೆ. ಸೇವಾಪೂರ್ವ, ಸೇವಾ ನಿರತ ಅವಧಿ ಮತ್ತು ನಿರಂತರ ವೃತ್ತಿಪರ ಬೆಳವಣಿಗೆಯನ್ನು ಒಂದು ನಿರಂತರ ಪ್ರಕ್ರಿಯೆಯಾಗಿ ನೋಡಬೇಕಾಗಿದೆ, ಈ ಸೇವೆಯನ್ನು ಉನ್ನತ ಶಿಕ್ಷಣದ ವಿಭಾಗದಲ್ಲಿ ನಿಗದಿಪಡಿಸಿದಂತೆ ವಿಶ್ವವಿದ್ಯಾಲಯಗಳು ಮತ್ತು ಇತರ ಉನ್ನತ ಶಿಕ್ಷಣ ಸಂಸ್ಥೆಗಳು (ಎಚ್‌ಇಐಗಳು) ಸಲ್ಲಿಸಬೇಕು. ಇದನ್ನು ಮುಖಾಮುಖಿ ಮತ್ತು ಮುಕ್ತ/ತೆರೆದ ಹಾಗು ದೂರ ಕಲಿಕೆ (Open and Distance Learning (ODL) ವಿಧಾನಗಳ ಮೂಲಕ ಮಾಡಬೇಕು. ಪ್ರಮಾಣಪತ್ರ ನೀಡಿಕೆ, ಅಂಕ ನಿಗದೀಕರಣ, ವಿಷಯ ಆಯ್ಕೆಗಳು, ಮಾನವಶಕ್ತಿ, ನೇಮಕಾತಿ ಮತ್ತು ಸೇವಾ ಷರತ್ತುಗಳು ಹಾಗೂ ವೃತ್ತಿ ಮಾರ್ಗಗಳು ಸೇರಿದಂತೆ, ಎಲ್ಲವನ್ನೂ ಏಕಕಾಲದಲ್ಲಿ ನೋಡಿಕೊಳ್ಳಬೇಕು. ಈ ಹಲವು ಅಂಶಗಳುಒಟ್ಟಾರೆ ಮಕ್ಕಳ ಅದರಲ್ಲೂ ಇಲ್ಲಿಯವರೆಗೆ ನಿರ್ಲಕ್ಷ್ಯಕ್ಕೆ ಒಳಗಾದ ವೈಕಲ್ಯವುಳ್ಳ ಮಕ್ಕಳ ವಿಶಾಲ ಹಿತಾಸಕ್ತಿಯಿಂದ ಯಶಸ್ವಿ ಅನುಷ್ಠಾನಕ್ಕೆ ನಿರ್ಣಾಯಕ. ರಾಷ್ಟ್ರೀಯ ಶಿಕ್ಷಕರ ವೃತ್ತಿ ಗುಣಮಟ್ಟ (National Professional Standards for Teachers -NPST)ದಲ್ಲಿ ನಿಗದಿಪಡಿಸಿದ ಹೊಸ ಮಾರ್ಗಸೂಚಿಗಳ ಅಡಿಯಲ್ಲಿ ಶಿಕ್ಷಕರನ್ನು ಬಿಎಡ್ ಕಾರ್ಯಕ್ರಮದ ವಿವಿಧ ವಿಭಾಗಗಳಲ್ಲಿ ತಯಾರಿ ಮಾಡಲಾಗುತ್ತದೆ, ಇದರಲ್ಲಿ ವಿಶೇಷ ಶಿಕ್ಷಣ ಬೋಧನೆ ಕೂಡ ಸೇರಿದೆ.

**ತಜ್ಞ ಶಿಕ್ಷಕರು**

ಶಾಲಾ ಶಿಕ್ಷಣದ ಕೆಲವು ವಿಭಾಗಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಿಶೇಷ ಶಿಕ್ಷಕರ ತುರ್ತು ಅವಶ್ಯಕತೆಯಿದೆ. ಕೆಲವು ಉದಾಹರಣೆಗಳೆಂದರೆ, ಮಾಧ್ಯಮಿಕ ಮತ್ತು ಸೆಕೆಂಡರಿ ಹಂತಗಳಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಬೋಧನೆ ಮಾಡಲು ಒಂದು ವಿಷಯದಲ್ಲಿ ಹೆಚ್ಚುಆಸಕ್ತಿ ಮತ್ತು ಪ್ರತಿಭೆಹೊಂದಿರುವ ವೈಕಲ್ಯವುಳ್ಳಮಕ್ಕಳ ಶಿಕ್ಷಣ ಮತ್ತು ನಿರ್ದಿಷ್ಟ ಕಲಿಕಾ ತೊಂದರೆಕುರಿತ ಶಿಕ್ಷಣದ ವಿಷಯದಲ್ಲಿ ತಜ್ಞರ ಅವಶ್ಯಕತೆ ಇದೆ.

ಅಂಥ ಶಿಕ್ಷಕರಿಗೆ ವಿಷಯ–ಬೋಧನೆ ಜ್ಞಾನ ಮತ್ತು ವಿಷಯಕ್ಕೆ ಸಂಬಂಧಪಟ್ಟ ಶಿಕ್ಷಣ ಗುರಿಗಳ ತಿಳುವಳಿಕೆ ಇದ್ದರಷ್ಟೆ ಸಾಲದು, ವೈಕಲ್ಯವುಳ್ಳ ಮಕ್ಕಳ ವಿಶೇಷ ಅವಶ್ಯಕತೆಗಳ ತಿಳುವಳಿಕೆ ಮತ್ತು ಅವರಿಗೆ ಬೋಧಿಸಲು ಅಗತ್ಯವಾದ ಕೌಶಲ್ಯಗಳನ್ನು ಅವರು ಹೊಂದಿರಬೇಕು.

ಸಾಮಾನ್ಯವಾಗಿ ವಿಶೇಷಶಿಕ್ಷಕರು ಪ್ರಾಥಮಿಕ ಶಾಲೆಯಲ್ಲಿ ಬೋಧಿಸುವ ವಿಷಯಗಳೆಲ್ಲದರಲ್ಲಿ ಕೆಲಸಮಾಡುವ ಸಾಕಷ್ಟು ಸಾಮರ್ಥ್ಯವನ್ನು ಹೊಂದಿರುತ್ತಾರೆ ಮತ್ತು ಮಾಧ್ಯಮಿಕ ಅಥವಾ ಸೆಕೆಂಡರಿ ಹಂತದಲ್ಲಿ ಒಬ್ಬ ವಿಷಯ ಶಿಕ್ಷಕರಿಗೆ ಪೂರಕವಾಗಿ ನೆರವು ನೀಡಬಲ್ಲರು.ಆದರೆ ವಿಶೇಷ ಶಿಕ್ಷಕರಿಗೆ ಶಾಲೆಯ ಉನ್ನತ ಹಂತಗಳಲ್ಲಿ ಒಂದು ವಿಷಯವನ್ನು ಬೋಧನೆ ಮಾಡಲು ಸಾಕಷ್ಟು ಜ್ಞಾನವಿಲ್ಲದಿರಬಹುದು. ಅಂತೆಯೇ, ಅಗತ್ಯವಿರುವ ಅನುಭವವನ್ನುಗಳಿಸಿದ ಬಳಿಕವೇ ನಿರ್ದಿಷ್ಟ ವಿಷಯದಲ್ಲಿ ಅಪ್ರತಿಮ ಆಸಕ್ತಿಗಳುಳ್ಳ ಮತ್ತು ಪ್ರತಿಭೆಗಳಿರುವ ಮಕ್ಕಳ ಬೋಧನೆಗೆ ಶಿಕ್ಷಕರು ಸೂಕ್ತವಾಗಿ ಹಾಗೂ ಉತ್ತಮವಾಗಿ ತಯಾರಾಗುತ್ತಾರೆ. ಸೇವಾ ಪೂರ್ವ ಶಿಕ್ಷಕ ತರಬೇತಿ ಮುಗಿದ ನಂತರ ಅಂತಹ ಕ್ಷೇತ್ರಗಳನ್ನು ಸಾಮಾನ್ಯ ಶಿಕ್ಷಕರಿಗೆ ದ್ವಿತೀಯ ಮಟ್ಟದ ತಜ್ಞತೆಯಾಗಿ ಅಭಿವೃದ್ಧಿ ಪಡಿಸಬಹುದು. ಇವುಗಳನ್ನು ಕೆಲಸದ ಅವಧಿಯಲ್ಲಿ ನೀಡುವ ತರಬೇತಿಯಾಗಿ ಪೂರ್ಣಾವಧಿ ಅಥವಾ ಅರೆಕಾಲಿಕ ಅವಧಿ ಅಥವಾ ಸಮ್ಮಿಶ್ರ ಬೋಧನಾ ಕೋರ್ಸಿನಲ್ಲಿ ಹೇಳಿಕೊಡಬೇಕು.

**ಕೊನೆಯ ಮಾತು**

ಆಯ್ಕೆ–ಆಧಾರಿತ ಕ್ರೆಡಿಟ್ ವ್ಯವಸ್ಥೆ, ಬದಲಾವಣೆ ಮಾಡಿಕೊಳ್ಳಲು ಆಯ್ಕೆಯ ಅವಕಾಶ ಮತ್ತು ಹೊಸ ವಿಷಯ ಸಂಯೋಜನೆಗಳಿಗೆ ಅವಕಾಶವಿರುವ ಬಹು ವಿದ್ಯಾ ವಿಭಾಗಗಳನ್ನುಳ್ಳ ವಿಶ್ವವಿದ್ಯಾಲಯಗಳ ಭವಿಷ್ಯದ ವಿಭಾಗಗಳನ್ನು ನಾವು ಹೇಗೆ ನೋಡುತ್ತೇವೆ? ಎಂಬುದು ಸವಾಲು. ಕುರುಕ್ಷೇತ್ರ ವಿಶ್ವವಿದ್ಯಾಲಯ ಮತ್ತು ಎನ್‌ಸಿಇಆರ್‌ಟಿಯ ಆರ್‌ಸಿಇ/

ಆರ್‌ಐಎಸ್‌ಗಳು ಭಾಷೆಗಳು, ಮಾನವಿಕಗಳು, ವಿಜ್ಞಾನಗಳು ಮತ್ತು ವಾಣಿಜ್ಯ ವಿಷಯಗಳಲ್ಲಿ ಪರಿಣಿತಿ ಜೊತೆಗೆ ನಾಲ್ಕು ವರ್ಷಗಳಸಮಗ್ರ ವಿಶೇಷಶಿಕ್ಷಕ ಶಿಕ್ಷಣ ಕಾರ್ಯಕ್ರಮವನ್ನು ನಡೆಸಿವೆ. ಒಂದು ಹಂತದಲ್ಲಿ, ಬೇಸಾಯ ಮತ್ತು ಇತರ ವೃತ್ತಿ ವಿಷಯ ಆಯ್ಕೆಗಳನ್ನು ಸಹಬಿ.ಎಡ್ ಮತ್ತು ಪ್ರಾಥಮಿಕ ಎಂ.ಎಡ್‌ನಲ್ಲಿ ಒದಗಿಸಲಾಗಿತ್ತು. ದುರದೃಷ್ಟವಶಾತ್, ಈ ಸಂಸ್ಥೆಗಳಿಗೆ ಪದವಿಗಳನ್ನು ನೀಡುವ ಮತ್ತು ತಮ್ಮ ರಾಜ್ಯಗಳ ವಿಶ್ವವಿದ್ಯಾಲಯುಗಳಿಗೆ ಸಂಯೋಜಿತ ಕಾಲೇಜುಗಳಾಗಿ ಮುಂದುವರಿಯುವ ಅವಕಾಶ ಎಂದೂ ಸಿಗಲಿಲ್ಲ. ನಾವು ಈ ಅನುಭವಗಳಿಂದ ಕಲಿಯಬೇಕು. ಏಕೆಂದರೆ ಇದು ನಮ್ಮ ಇಂದಿನ ನಿರ್ಧಾರಗಳು ಯಾರ ಮೇಲೆ ಪ್ರಭಾವ ಬೀರುತ್ತದೆಯೋ ಆ ನಮ್ಮ ಮುಂದಿನ ಪೀಳಿಗೆಗೆ ನಾವು ಉತ್ತರದಾಯಿಗಳಾಗಿದ್ದೇವೆ.

ನೀತಿ–ನಿರೂಪಕರು ಮತ್ತು ಆಡಳಿತಗಾರರು ಈ ಸಮಸ್ಯೆಗಳ ಬಗ್ಗೆ ಹಿಡಿತ ಸಾಧಿಸಬೇಕೆಂದುನಿರಂತರ ಪ್ರಯತ್ನಿಸುತ್ತಿರುವಾಗ ಈ ಕ್ಷಣದಲ್ಲೂ ವಿಶೇಷ ಅಗತ್ಯವುಳ್ಳ ಮಕ್ಕಳ ಪರವಾಗಿ ನಾವು ಮುಂದುವರೆಯ ಬೇಕಾಗಿರುವುದು ನಮ್ಮ  ಅಗತ್ಯವಾಗಿದೆ. ಈ ಕೆಳಕಂಡ ಆದರ್ಶಗಳನ್ನು ಪಾಲಿಸೋಣ ಮತ್ತು ವಿಶೇಷ ಅಗತ್ಯವುಳ್ಳ ಮಕ್ಕಳ ಉದ್ದೇಶದ ಪರವಾಗಿ ಶ್ರಮಿಸೋಣ:4

1. ಜೀವನಪರ್ಯಂತ ಕಲಿಯುವವರಾಗಿರಿ ಮತ್ತು ನಮ್ಮ ವಿದ್ಯಾರ್ಥಿಗಳಿಗೂ ಇದೇ ರೀತಿ ಕಲಿಯಲು ಸ್ಫೂರ್ತಿ ನೀಡಿ.
2. ಕಲಿಕೆ ಮತ್ತು ಬೋಧನೆಯು ನಿರಂತರ ಮತ್ತು ಸಮೃದ್ಧ–ಗೊಳಿಸುವ ಪ್ರಕ್ರಿಯೆಯಾಗಿದ್ದು, ತಪಾಸಣಾ ಸಾಮಗ್ರಿಗಳಾಗಿ, ನಿರಂತರ ಮತ್ತು ಸಮಗ್ರ ಮೌಲ್ಯ–ಮಾಪನ ಮತ್ತು ಪರೀಕ್ಷೆಗಳನ್ನಿಟ್ಟುಕೊಂಡು ಕಲಿಕೆಯ ಫಲಿತಾಂಶಗಳಂತಹ ಇತ್ತೀಚಿನ ಬೆಳವಣಿಗೆಗಳೊಂದಿಗೆ ಸಂಪರ್ಕದಲ್ಲಿರಿ,
3. ಎಲ್ಲಾ ಮಕ್ಕಳಿಗೆ ಸಬಲೀಕರಣ ಪ್ರಕ್ರಿಯೆಯಾಗಿ ಸಾರ್ವತ್ರಿಕ ಕಲಿಕಾ ವಿನ್ಯಾಸ / ಯೂನಿವರ್ಸಲ್ ಡಿಸೈನ್ ಫಾರ್ ಲರ್ನಿಂಗ್ (ಯುಡಿಎಲ್) ಅನ್ನು ರಚಿಸುವ ಬಗ್ಗೆ ಪರಿಗಣಿಸಿ.
4. ಪ್ರತಿಯೊಬ್ಬರೂ ಜವಾಬ್ದಾರಿಯುತ ನಾಗರಿಕರೆಂದು ನಂಬಿ, ಗುರುತಿಸಿ ಮತ್ತು ಗೌರವಿಸಿ ಹಾಗು ವಿಶೇಷ ಅಗತ್ಯವುಳ್ಳ ಮಕ್ಕಳು ಸಹ ನಮ್ಮಲ್ಲಿ ಒಬ್ಬರೆಂದು ಭಾವಿಸಿ.
5. ನಿಮ್ಮ ಸಾಮರ್ಥ್ಯಗಳು ಮತ್ತು ದೌರ್ಬಲ್ಯಗಳನ್ನು ಅರಿತು ಬದಲಾವಣೆಯ ಪ್ರೇರಕರಾಗಿ, ಅವಕಾಶಗಳನ್ನು ಹುಡುಕುವವರಾಗಿ, ಸ್ಪಂದಿಸುವವರಾಗಿ. ಆದರೆ ಕಟ್ಟುಕಟ್ಟಳೆ ಹೇರುವವರಾಗದಿರಿ.

[i] Birrell, Ian. (23 April 2019). *Greta Thunberg teaches us about autism as much as climate change*.
https://www.theguardian.com/commentisfree/2019/apr/23/greta-thunberg-autism/
accessed on 21 September 2019.

[ii]Smith, M. K. (2015). What is education? A definition and discussion. *The encyclopaedia of informal education*. [http://infed.org/mobi/what-is-education-a-definition-and-discussion/. Retrieved 20 September 2019.

[iii] Portions of this writing are also from Author's chapter on Education of Persons with Disabilities in Indian Education: A developmental Discourse by Mukhopadhyay Marmar and Parhar Madhu (Eds), Shipra Publications, 2015.

[iv]Will advise all readers to read books by Shivani Gupta, No Looking Back, Rupa Publications Pvt. Ltd and Malini Chib, One Little Finger, Sage India.

[v]http://seshagun.gov.in/sites/default/files/2019-05/disabilitiesAct2016.pdf/accessed 22  September 2019.

[vi]Adapted from Mukhopadhyay, Sudesh, Making the Difference: Our Roles and Responsibilities. In Verma Preeti et.al. (eds.) (2019); *Be the Difference: Equality and Equity in Education*, Mumbai; Department of Special Education, SNDT.PP332-333.



**ಡಾ. ಸುದೇಶ್ ಮುಖೋಪಾಧ್ಯಾಯರವರು** ಆರ್‌ಸಿಐನ ಮಾಜಿ ಅಧ್ಯಕ್ಷರು ಮತ್ತು ಈಗ ಎನ್‌ಸಿಟಿಇನ ಸ್ಥಾಯಿ ಸಮಿತಿಯ ಸದಸ್ಯರಾಗಿದ್ದಾರೆ. ಅವರು ವಿಶೇಷ ಶಿಕ್ಷಣದಲ್ಲಿ ಲಂಡನ್ ಯೂನಿವರ್ಸಿಟಿ ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್‌ನ ಅಸೋಸಿಯೇಟ್ ಆಗಿದ್ದಾರೆ ಮತ್ತು ಕೆನಡಾದ ಮ್ಯಾನಿಟೋಬಾ ವಿಶ್ವವಿದ್ಯಾಲಯ ಮತ್ತು ಆಸ್ಟ್ರೇಲಿಯಾದ ಸಿಡ್ನಿಯ ಮೊನಾಶ್ ವಿಶ್ವವಿದ್ಯಾಲಯದ ವಿಸಿಟ್‌ಂಗ್ ಫೆಲೊ ಆಗಿದ್ದಾರೆ. ಅವರನ್ನು drsudesh.mukhopadhyay@gamil.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಹೇಮಾದೇವಿ ಬಿ ಎನ್** । ಪರಿಶೀಲನೆ: **ಜೈಕುಮಾರ್ ಮರಿಯಪ್ಪ**